ಬಾರುಗಳ ಭರಾಟೆ ನಡೆದಿತ್ತು. ಪಿಟ್ ಸ್ಟ್ರೀಟನ್ನು ದಾಟಿ ಹೈಡ್ ಪಾರ್ಕಿನ ಮೂಲಕ ಟೌನ್‌ಹಾಲ್ ಸ್ಟೇಷನ್ನಿನ ದಾರಿ ಹಿಡಿದೆವು. ಸಿಡಿಜಿ ಮುಂದೆ ನಡೆಯುತ್ತಿದ್ದ. ನಮ್ಮ ಮ್ಯಾನೆಜರ್ ಹಾಗೂ ಸಂಜೀವ್ ಇನ್ನು ತಮ್ಮ ಚರ್ಚೆಯಲ್ಲಿ ಮುಳುಗಿದ್ದು ಗುಂಪಿನ ಹಿಂದಿದ್ದರು. ಹೈಡ್ ಪಾರ್ಕಿನಲ್ಲಿ ಚಾಪೆಯೊಂದರ ಮೇಲೆ ಮಲಗಿ, ಸಂಜೆ ಚರ್ಚಿನಲ್ಲಿ ಕೊಡುವ ಬ್ರೆಡ್ ತಿಂದು, ಹಾದು ಹೋಗುವವರ ಬಳಿ ಚಿಲ್ಲರೆ ಕೇಳುವವರ ದೃಶ್ಯ ಸಹಜವೇ ಆಗಿತ್ತು. ಆದರೆ ಅಂದು ಮಾತ್ರ ನಡೆದದ್ದು ಬೇರೆಯೇ. ಅವನು ಹರಕು ಜ್ಯಾಕೆಟ್ ಮತ್ತು ಕೊಳಕು ಜೀನ್ಸ್ ತೊಟ್ಟಿದ್ದ. ನೀರು ಕಾಣದ ಕೆಂಚುಗೂದಲು ಜಟೆಗಟ್ಟಿದ್ದವು. ಬರಿಗಾಲಿನಲ್ಲಿ ಎಲ್ಲಿಂದಲೋ ಓಡುನಡಿಗೆಯಲ್ಲಿ ಬಂದು ಒಮ್ಮೆಲೇ ತನ್ನ ಜೀನ್ಸ್ ಕಳಚಿ ಹಾದು ಹೋಗುತ್ತಿದ್ದ ಜನರ ಎದುರೇ ಉಚ್ಚೆ ಹೊಯ್ಯುತ್ತಾ ನಿಂತುಬಿಟ್ಟ. ಅವನನ್ನು ನೋಡಿದ್ದೇ ದಂಗೆದ್ದ ಜನರು ಹಾದಿ ತಪ್ಪಿಸಿ ದೂರಕ್ಕೆ ಓಡಿದರು. ಒಬ್ಬಳು **"Call the police!"** ಎಂದು ಕೂಗಿದಳು. ಸ್ಕೂಲಿನ ಯೂನಿಫಾರ್ಮ್ ತೊಟ್ಟ ಹುಡುಗನೊಬ್ಬ ಅಸಹ್ಯದಿಂದ ಅವನತ್ತ ಕಲ್ಲೆಸೆದ. ಪ್ರಾಮಿನಲ್ಲಿದ್ದ ಮಗುವಿನ ಜೊತೆ ನಡೆಯುತ್ತಿದ್ದ ಹೆಂಗಸೊಬ್ಬಳು ಗಾಬರಿಗೊಂಡು **"Help!"** ಎನ್ನುತ್ತಾ ಹಿಂದಿರುಗಿ ಸಿಟಿ ಸೆಂಟರಿನತ್ತ ನಡೆದುಬಿಟ್ಟಳು. ನನ್ನ ಮುಂದೆ ನಡೆಯುತ್ತಿದ್ದ ಸಿಡಿಜಿ ಮಾತ್ರ ನಿಂತಲ್ಲೇ ನಿಂತುಬಿಟ್ಟ. ಹುಡುಗನನ್ನು ಅಚ್ಚರಿ ಮತ್ತು ಭಯ ಮಿಶ್ರಿತ ಆಕರ್ಷಣೆಯಲ್ಲಿ ನೋಡುತ್ತಾ ತನ್ನನ್ನೇ ಮರೆತಿದ್ದ. ಹತ್ತಿರಕ್ಕೆ ಹೋಗಿ **"Are you ok?"** ಎಂದು ಕೇಳಿದಾಗ, ಸಿಡಿಜಿ ನಿಟ್ಟುಸಿರು ಬಿಟ್ಟು, ತನ್ನ ನೀಲಿ ಫ್ರೇಮಿನ ಗ್ಲಾಸ್ ತೆಗೆದು ಜೇಬಿನಲ್ಲಿಟುಕೊಂಡು ಕಣ್ಣುಗಳನ್ನೊಮ್ಮೆ ಬಲವಾಗಿ ಮುಚ್ಚಿ ತೆಗೆದ. ನನ್ನನ್ನು ನೋಡಿ ಏನೂ ಮಾತಾಡದೆ ಮತ್ತೆ ಅವನನ್ನೇ ನೋಡುತ್ತ ನಿಂತ. ಕುರುಚಲು ಗಡ್ಡದ ಹುಡುಗ ಎಲ್ಲಾ ಮುಗಿಸಿ ಕಳಚಿದ್ದ ಜೀನ್ಸನ್ನು ಉಡಾಫೆಯಿಂದ ಮೇಲೆಳೆಯುತ್ತಾ ಸುತ್ತಲಿನ ಪರಿವೆಯೇ ಇಲ್ಲದೇ ಪಾರ್ಕಿನ ಕಲ್ಲುಬೆಂಚಿಗೊರಗಿ ಹೋಗುತ್ತಿದ್ದವರನೊಮ್ಮೆ ಅಣಕಿಸುವಂತೆ ನೋಡಿ ಚರ್ಚಿನತ್ತ ನಡೆದಬಿಟ್ಟ. ನಡೆದ ಸಂಗತಿಯನ್ನು ತಡವಾಗಿ ಅರಿತ ಸಂಜೀವ್ ಮ್ಯಾನೇಜರ್ ಹತ್ತಿರ **"What a menace!"** ಎಂದು ಗೊಣಗುತ್ತಾ ನಮ್ಮನ್ನು ಹಾದು ಹೋದ.

★★★

ಇನ್ನು ಕೆಲವೇ ನಿಮಿಷಗಳಲ್ಲಿ ನಾವು ಸಿಡ್ನಿಯ ಕಿಂಗ್‌ಸ್ಫೋರ್ಡ್ ಏರ್‌ಪೋರ್ಟ್‌ನಲ್ಲಿ ಲ್ಯಾಂಡ್ ಆಗುತ್ತೇವೆಂದು ವಿಮಾನದ ಕ್ಯಾಪ್ಟನ್ ಅನೌನ್ಸ್ ಮಾಡಿದ. ಎರಡು ವರ್ಷಗಳು ಸದ್ದಿಲ್ಲದೇ ಸರಿದು ಮತ್ತೊಂದು ಪ್ರಾಜೆಕ್ಟಿಗಾಗಿ ಬಿಟ್ಟು ಬಂದ ದ್ವೀಪ ಖಂಡಕ್ಕೆ ಹಿಂದಿರುಗುತ್ತಿದ್ದೆ.

ಟೌನ್‌ಹಾಲ್ ಸ್ಟೇಷನ್ ತಲುಪಿದಾಗ ಆಗಲೇ ಹತ್ತು ಗಂಟೆಯಾಗಿ ಆಫೀಸಿಗೆ ತಡವಾಗಿತ್ತು. ನಿಧಾನಕ್ಕೆ ಉಸಿರು ಬಿಗಿಹಿಡಿದೇ ಸ್ಟೇಷನ್ನಿನ ಹೊರಬಿದ್ದೆ. ಕಾಫಿ ಶಾಪುಗಳ ಸಾಲಿದ್ದ ಜಾಗದಲ್ಲಿ ವಿಕ್ಟೋರಿಯಾ ಸೀಕ್ರೆಟ್ಸಿನ ಒಳಉಡುಪುಗಳ ಎರಡು ಅಂತಸ್ತಿನ ದೊಡ್ಡ ಮಳಿಗೆ ಎದ್ದುನಿಂತಿತ್ತು. ಕಾಫಿ ಶಾಪಿನ ಜನರ ಗದ್ದಲ, ರೇಡಿಯೊ ಸ್ಟೇಷನ್ನಿನ್ನ ಮಾರ್ನಿಂಗ್ ಷೋದ ಹಾಡುಗಳು, ಮೆಕ್ಸಿಕನ್ ಹುಡುಗಿಯರ ಜೋರು ನಗೆ, ಟರ್ಕಿಶ್ ಬ್ರೆಡ್ಡಿನ ಬಿಸಿ ವಾಸನೆ ಇದ್ದಲ್ಲಿ ವಿವಿಧ ಬಗೆಯ ಬ್ರಾ ತೊಟ್ಟು ನಿಂತ ಹೆಣ್ಣು ಮ್ಯಾನೆಕ್ವಿನ್‌ಗಳಿದ್ದವು. ಆಗಷ್ಟೇ ಬಾಗಿಲು ತೆರೆಯುತ್ತಿದ್ದ ಮಳಿಗೆಯ ಒಂದು ಕೊನೆಯಲ್ಲಿ ಇಬ್ಬರು ಸ್ಟಾಫ್ ಹುಡುಗರು ಸೇರಿ ಮ್ಯಾನೆಕ್ವಿನ್ ಒಂದಕ್ಕೆ ಗುಂಗುರು ಕೂದಲಿನ ವಿಗ್ ತೊಡಿಸಿ ಕಪ್ಪು ಬಣ್ಣದ ಬ್ರಾ ಹಾಕುತ್ತಿದ್ದರು. ಹಾದು ಹೋಗುತ್ತಿದ್ದಾಗ ಮಳಿಗೆಯೊಳಗಿನ ಫರ್‌ಫ್ಯೂಮುಗಳ ದಟ್ಟ ಘಮಲಿನಿಂದ ತಲೆಭಾರವಾಗಿ ರಸ್ತೆ ದಾಟಿ ಆಫೀಸಿನತ್ತ ನಡೆದೆ. ನನ್ನ ಬರುವನ್ನೇ ಕಾಯುತ್ತಿದ್ದ ಮ್ಯಾನೇಜರ್ ಹೊಸ ಟೀಮನ್ನು ಪರಿಚಯಿಸಿ **"He is back with us for another project!"** ಎಂದು ಅಭಿಮಾನದಿಂದ ಹೇಳಿದ. ತನ್ನ ಕ್ಯಾಬಿನ್ನಿಗೆ ಕರೆದು ಕಲವು